Bruhat Bengaluru Mahanagara Palike

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,

12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:19-12-2020ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ.ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾ.ನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರು, ಹಾಗು ಸಮಿತಿ ಕಾರ್ಯದರ್ಶಿ Ward 67. |
| 3. | ಶ್ರೀ. ರಂಗನಾಥ್ ಎಚ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ನಾಗಪುರ ಉಪವಿಭಾಗ |
| 4. | ಶ್ರೀ.ಲಕ್ಷ್ಮೀಕಾಂತ | ವಾರ್ಡ ಸದಸ್ಯರು |
| 5. | ಶ್ರೀ. ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 6. | ಶ್ರೀ. ರಾಮಚಂದ್ರ | 1ನೇ ಎನ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 7. | ಶ್ರೀಮತಿ.ಕಾವೇರಮ್ಮ | ವಾರ್ಡ ಸದಸ್ಯರು |
| 8. | ಶ್ರೀ.ಗಂಗಹನುಮಯ್ಯ | ವಾರ್ಡ ಸದಸ್ಯರು |
| 9. | ಶ್ರೀಮತಿ. ಗೀತಾ ಕೇನಾಲ್ | ವಾರ್ಡ ಸದಸ್ಯರು |
| 10. | ಶ್ರೀ.ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ:67 |
| 11. | ಶ್ರೀ. ನಾಗರಾಜು | ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ |
| 12. | ಶ್ರೀ. ಶ್ರೀನಿವಾಸ ಗೌಡ | ಗುತ್ತಿಗೆದಾರರು ಘನ ತ್ಯಾಜ್ಯ ನಿರ್ವಹಣೆ |
| 13. | ಶ್ರೀ.ಗೋಪಾಲಕೃಷ್ಣ | ಸಂಚಾರಿ ಪೋಲಿಸ್ ಕಾನ್ಸಟೆಬಲ್ |
| 14. | ಶ್ರೀಮತಿ. ಜಿ. ಶೃತಿ. | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್- 67 |

Pg (1)

Scanned by CamScanner

| | | |
|---|---|---|
| | | ಪಶುಸಂಗೋಪನೆ ವಿಭಾಗ,ನಿರೀಕ್ಷಕರು |
| 15. | ಶ್ರೀ.ಲೋಕೇಶ್, | ಮಾರ್ಷಲ್ ವಾರ್ಡ್ ಸಂಖ್ಯೆ:67 |
| 16. | ಶ್ರೀ. ಸುನೀಲ್ | ಅರಣ್ಯ ಇಲಾಕೆ ಗುತ್ತಿಗೆದಾರರ ಸಿಭಂದಿ |
| 17. | ಶ್ರೀ. ಮಲ್ಲಯ್ಯ | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು |
| 18. | ಶ್ರೀ. ಶಿವರಂ | ಕಿರಿಯ ಅಭಿಯಂತರರು ಬೆಸ್ಕಂ, ರಾಜಾಜಿನಗರ |
| 19. | ಶ್ರೀ. ಮಾರಣ್ಣ .ಸಿ | ತೋಟಗಾರಿಕೆ ಇಲಾಖೆ ,ಮಹಾಲಕ್ಷ್ಮೀಲೇಔಟ್ |
| 20. | ಶ್ರೀ. ಮಂಜುನಾಥ್ | ಸಹಾಯಕ ಅಭಿಯಂತರರು, ಬೆಸ್ಕಂ |
| 21. | ಶ್ರೀ. ಗಿರೀಶ್ | ಮಹಾಲಕ್ಷ್ಮೀಲೇಔಟ್ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಡಿಸೆಂಬರ್ ಮಾಹೆಯ ಮೂರನೇ ಶನಿವಾರ ದಿ:19/12/2020ರಂದು ಬೆಳ್ಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

| | |
|---|---|
| ಶ್ರೀ. ಉದಯ ಶಂಕರ<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನಲ್ಲಿ ಸಿ.ಸಿ ಕ್ಯಾಮೆರಾಗಳ ಅವಶ್ಯಕತೆ ಕಂಡುಬಂದಿರುತ್ತದೆ. ಮತ್ತು ಈಗಾಗಲೆ ಅಳವಡಿಸಿರುವ ಸಿ.ಸಿ ಕ್ಯಾಮೆರಾಗಳು ದುರಸ್ತಿಯಾಗಿದ್ದು ಅದರ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಿದರು. |
| ಶ್ರೀ.ಬಿ.ಸಿ ರವಿಕುಮಾರ್<br>ಸಹಾಯಕ ಅಭಿಯಂತರರು | ವಾರ್ಡ್‌ನಲ್ಲಿ ಸಿ.ಸಿ ಕ್ಯಾಮೆರಾಗಳ ವೈರ್‌ಗಳು ಕಡಿತಗೊಂಡಿದ್ದು ಅದರ ನಿರ್ವಹಣೆ ಮಾಡಲು ಮತ್ತು ಹೊಸ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸಲು ಅಂದಾಜು ಪಟ್ಟಿ ತಾಯಾರಿಸಿ ಲಭ್ಯ ವಿರುವ ಅನುದಾನದಲ್ಲಿ ಜಾಬ್ ಸಂಕೇತ ನೀಡಲು ಸಭೆಯಲ್ಲಿ ಮಂಡಿಸಿದೆ |
| ಶ್ರೀ. ಉದಯ ಶಂಕರ<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್‌ನಿಂದ ಪಂಚಮುಖಿ ದೇವಸ್ಥಾನದ ಕಡಿಗೆ (ಬಲಕ್ಕೆ) ತಿರುಗುವ ಮಾರ್ಗವನ್ನು ಡಿವೈಡರ್‌ನಿಂದ ಮುಚಿದ್ದು ಅದನ್ನು ಎಂದಿನಂತೆ ಮಾರ್ಗವನ್ನು ತೆರೆಯುವುದರಿಂದ ಸಾರ್ವಜನಿಕರಿಗೆ ಅನುಕುಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್ ಹತ್ತಿರ ವೈಟ್ ಟಾಪಿಂಗ್ ಕಾಮಗಾರಿಯು ಪ್ರಗತಿಯಲ್ಲಿದ್ದು ಮಾರ್ಗವನ್ನು ಡಿವೈಡರ್‌ನಿಂದ ಮುಚಿದ್ದು ಕಂಡುಬಂದಿರುತ್ತದೆ . ಇದರ ಬಗ್ಗೆ ಕಾರ್ಯಪಾಲಕ ಅಭಿಯಂತರರು ವೈಟ್ ಟಾಪಿಂಗ್ ರವರ ಹತ್ತಿರ ಚರ್ಚಿಸುವುದಾಗಿ ತಿಳಿಸಿದರು |
| ಶ್ರೀಮತಿ.ಕಾವೇರಮ್ಮ,<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ವಿದ್ಯಾ ಭಾರತಿ ಶಾಲೆ ಹತ್ತಿರ ರಸ್ತೆಯಲ್ಲಿ ಬೀದಿ ದೀಪ ಉರಿಯುತ್ತಿಲ್ಲವೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |



Scanned by CamScanner

| | |
|---|---|
| ಶ್ರೀ. ಶಿವರಾಂ ಬೀದಿದೀಪ ನಿರ್ವಹಣೆ ಗುತ್ತಗೆದಾರರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಬೀದಿದೀಪ ನಿರ್ವಹಣೆ ಗುತ್ತಗೆದಾರರು ಶ್ರೀ. ಶಿವರಾಂ ರವರು ಸಭೆಗೆ ಹಾಜರಿದ್ದು ಸಮಸ್ಯೆಯನ್ನು ಸರಿಪಡಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು. |
| ಶ್ರೀಮತಿ.ಕಾವೇರಮ್ಮ, ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡುವ ಗುತ್ತಗೆದಾರರ ವಿವರವನ್ನು ನೀಡಲು ಕೋರಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡುವ ಗುತ್ತಗೆದಾರರ ನೇಮಕ ಮಾಡಲು ಟೆಂಡರ್ ಪ್ರಕ್ರೀಯೆ ಚಾಲ್ತಿಯಲ್ಲಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು |
| ಶ್ರೀ. ರಾಮಚಂದ್ರ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಬ್ಲಾಕ್‌ನಲ್ಲಿ ಸ್ಕಯ್ ವಾಕ್ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು ಸಾರ್ವಜನಿಕರಿಗೆ ಓಡಾಡಲು ರಸ್ತೆಯಿಂದ ಗ್ರೆಡಿಯಂಟ್ ನೀಡಬೇಕು ಅಥವ ಮೆಟಲುಗಳನ್ನು ಹಾಕಬೇಕು ಇದರಿಂದ ಸಾರ್ವಜನಿಕರಿಗೆ ಓಡಾಡಲು ಅನುಕುಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಕಾಮಗಾರಿ ಇಲಾಖೆಯ ಸಹಾಯಕ ಅಭಿಯಂತರರು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು. |
| ಶ್ರೀ. ರಾಮಚಂದ್ರ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 1ನೇ'ನ್ 'ಬ್ಲಾಕ್ 9ನೇ ಅಡ್ಡ ರಸ್ತೆ ಬದಿ ಚರಂಡಿ ಸ್ವಚ್ಛಗೊಳಿಸುವುದು ಮತ್ತು ಹೂಳು ತೆಗೆದು ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು ಮತ್ತು 7ನೇ ಅಡ್ಡ ರಸ್ತೆಯಲ್ಲಿ ಹಂಪ್ಸ್‌ಗೆ ಪೆಯಂಟಿಂಗ್ ಮಾಡಬೇಕು |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ರಾಜಾಜಿನಗರ 1ನೇ'ನ್ 'ಬ್ಲಾಕ್ 9ನೇ ಅಡ್ಡ ರಸ್ತೆ ಬದಿ ಚರಂಡಿ ಸ್ವಚ್ಛಗೊಳಿಸುವುದು ಮತ್ತು ಹೂಳು ತೆಗೆದು ನೀರು ಸರಾಗವಾಗಿ ಹರಿಯುವಂತೆ ಮಾಡಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಮತ್ತು ಮುಂದಿನ ದಿನಗಳಲ್ಲಿ ರಸ್ತೆಗಳನ್ನು ಡಾಂಬರಿಕರಣ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು |
| ಶ್ರೀ.ಗಂಗಹನುಮಯ್ಯ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಮಹಾಲಕ್ಷೀಪುರಂನಲ್ಲಿ ಸ್ಕೇಟಿಂಗ್ ಮೈದಾನವನ್ನು ಸ್ವಚತೆ ಮಾಡುವುದರಿಂದ ಸಾರ್ವಜನಿಕರಿಗೆ ಅನುಕುಲವಾಗುವುದು ಮತ್ತು ಬಿ.ಜಿ.ಎಸ್ ಶಾಲೆ ಹತ್ತಿರ ಬೀದಿ ದೀಪಗಳನ್ನು ರಸ್ತೆಯ ಇನ್ನೊಂದು ಬದಿಗೆ ವರ್ಗಾಹಿಸುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಕಾಮಗಾರಿ ಇಲಾಖೆಯ ಸಹಾಯಕ ಅಭಿಯಂತರರು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು. |
| ಶ್ರೀ.ಲಕ್ಷ್ಮೀಕಾಂತ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 15ನೇ ಅಡ್ಡ ರಸ್ತೆ ಮಹಾಲಕ್ಷ್ಮೀಲೇಔಟ್ ರಲ್ಲಿ ಮನೆ ನಂ87/ಬಿ ರ ಮಾಲೀಕರು, ಅವರ ಅನುಕುಲಕ್ಕೆ ತಕ್ಕಂತೆ ರ‍್ಯಾಂಪ್ ನಿರ್ಮಿಸಿರುತ್ತಾರೆ ಇದರಿಂದ ರಸ್ತೆಯ ಕಸ ರ‍್ಯಾಂಪ್ ಹತ್ತಿರ ಸಂಗ್ರಹವಾಗುತ್ತಿರುತ್ತದೆ ಇದರಿಂದ ಬಹಳ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಉದಯ ಶಂಕರ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಮರಗಳ ಕೊಂಬೆಗಳನ್ನು ಟ್ರಿಮಿಂಗ್ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು. |

Pg (3)

Scanned by CamScanner

| | |
|---|---|
| ಶ್ರೀ.ಮಲಯ್ಯ<br>ಅರಣ್ಯ ಇಲಾಖೆ<br>ಗುತ್ತಿಗೆದಾರರ ಸಿಬಂಧಿ | ವಾರ್ಡ್ ಸಮಿತಿ ಸದಸ್ಯರವರ ಮತ್ತು ಅಧ್ಯಕ್ಷರ ದೂರಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಗೆ ಸಂಭಂದಿಸಿದ ಶ್ರೀ.ಮಲಯ್ಯ ರವರು ಸಭೆಗೆ ಹಾಜರಿದ್ದು ಮರಗಳ ಕೊಂಬೆಗಳನ್ನು ಟ್ರಿಮಿಂಗ್ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 19ನೇ ಜಿ ಅಡ್ಡ ರಸ್ತೆ ರಾಜಾಜಿನಗರ (1ನೇ ಬ್ಲಾಕ್ ಸುತ್ತಮುತ್ತಲು) ನಾಯಿಗಳ ಕಾಟ ಹೆಚ್ಚಾಗಿದ್ದು ರಸ್ತೆಗಳಲ್ಲಿ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಲೋಕೇಶ್<br>ಪಶುಸಂಗೋಪನೆ ಇಲಾಖೆ | ವಾರ್ಡ್ ಸಮಿತಿ ಅಧ್ಯಕ್ಷರವರ ದೂರಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶದನ್ವಯ ನಾಯಿಗಳನ್ನು ಒಂದೆಡೆ ಯಿಂದ ಬೇರೆಡೆಗೆ ಬಿಡಲು ಅವಕಾಶವಿರುವುದಿಲ್ಲ. ಆದ್ದರಿಂದ ನಾಯಿಗಳಿಗೆ ಶಸ್ತ್ರ ಚಿಕಿತ್ಸೆಯನ್ನು ನಡೆಸಿ ,ವಾಕ್ಸಿನ್ ನೀಡಿ ನಾಲ್ಕು ದಿನಗಳ ಶುಶ್ರೂಷೆಯನ್ನು ಮಾಡಿ ಮತ್ತೆ ರಸ್ತೆಗೆ ಬಿಡಲಾಗುವುದು ಎಂದು ಮಾಹಿತಿ ಒದಗಿಸಿದರು. |
| ಶ್ರೀ. ಬೈರಪ್ಪ<br>ಪೋಲಿಸ್ ಇಲಾಖೆ | ವಾರ್ಡ್‌ನಲ್ಲಿ ಕಳ್ಳತನದ ಪ್ರಕರಣಗಳು ಹೆಚ್ಚಾಗುತಿದ್ದು ಸಿ.ಸಿ ಕ್ಯಾಮೆರಾಗಳ ಅವಶ್ಯಕತೆ ಕಂಡುಬಂದಿರುತ್ತದೆ. ಮತ್ತು ಈಗಾಗಲೆ ಅಳವಡಿಸಿರುವ ಸಿ.ಸಿ ಕ್ಯಾಮೆರಾಗಳು ದುರಸ್ತಿಯಾಗಿದ್ದು ಅದರ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಿದರು. |
| ಶ್ರೀ.ಬಿ.ಸಿ ರವಿಕುಮಾರ್<br>ಸಹಾಯಕ ಅಭಿಯಂತರರು | ವಾರ್ಡ್‌ನಲ್ಲಿ ಸಿ.ಸಿ ಕ್ಯಾಮೆರಾಗಳ ವೈರ್‌ಗಳು ಕಡಿತಗೊಂಡಿದ್ದು ಅದರ ನಿರ್ವಹಣೆ ಮಾಡಲು ಮತ್ತು ಹೊಸ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸಲು ಅಂದಾಜು ಪಟ್ಟಿ ತಾಯಾರಿಸಿ ಲಭ್ಯ ವಿರುವ ಅನುದಾನದಲ್ಲಿ ಜಾಬ್ ಸಂಕೇತ ನೀಡಲು ಸಭೆಯಲ್ಲಿ ಮಂಡಿಸಿದೆ |
| ಶ್ರೀಮತಿ ಗೀತಾಕೇನಾಲ್<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ಅಂಗಡಿ ಮಾಲಿಕರು ಸಾಮರ್ಗಿಗಳನ್ನು ಮಾರಾಟ ಮಾಡುತ್ತಿದು ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀ.ಬಿ.ಸಿ ರವಿಕುಮಾರ್<br>ಸಹಾಯಕ ಅಭಿಯಂತರರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಕಾಮಗಾರಿ ಇಲಾಖೆಯ ಸಹಾಯಕ ಅಭಿಯಂತರರು ಮಾತನಾಡಿ ಈಗಾಗಲೆ ಹಲವಾರು ಬಾರಿ ಮೌಖಿಕವಾಗಿ ಮಾಲಿಕರಿಗೆ ಸಾಮರ್ಗಿಗಳನ್ನು ತೆರವುಗೊಳಿಸಲು ಎಚ್ಚರಿಕೆ ನೀಡಿರುತ್ತಾರೆ ಇದಾಗಿಯು ಸಹಾ ಅಂಗಡಿ ಮಾಲಿಕರು ಸಾಮರ್ಗಿಗಳನ್ನು ತೆರವುಗೊಳಿಸಿರುವುದಿಲ್ಲ ಅವರ ಮೇಲೆ ಕ್ರಮವಹಿಸಿ ದಂಡ ಹಾಕಲು ಸಭೆಯಲ್ಲಿ ಸೂಚಿಸಿದರು |
| ಶ್ರೀ. ಶ್ರೀನಿವಾಸ ಗೌಡ<br>ಗುತ್ತಗೆದಾರರು | ಬಿ.ಬಿ.ಎಂ.ಪಿ ವತಿಯಿಂದ 7ತಿಂಗಳಿನಿಂದ ಘ.ತ್ಯಾ.ನಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿರುವುದಲ್ಲ ಅದನ್ನು ಆದಷ್ಟು ಬೇಗ ಪಾವತಿ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು. |

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

28/12/2020
ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner